# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 29-03-2022

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್ :drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-1:ಸಿಂ-2:22/ ೨೨ /2022-23 ದಿನಾಂಕ:11-04-2022

ಮಾನ್ಯರೆ,

ವಿಷಯ: ದಿನಾಂಕ:29-03-2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ- III ರ ಪ್ರಕರಣ- 16 ರನ್ವಯ ದಿನಾಂಕ:29-03-2022 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:29-03-2022 ರಂದು ಮಂಗಳವಾರ ಪೂರ್ವಾಹ್ನ :11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಅಶೋಕ್ ಡಿ. ರೇವಣ್‌ಕರ್, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 10. | ಶ್ರೀ ಧರ್ಮಪ್ರಸಾದ್ ಜಿ. | ಸದಸ್ಯರು |
| 11. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 12. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. | ಪ್ರೊ. ರಿಯಾಜ್ ಮಹಮೂದ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 14. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 15. | ಶ್ರೀ ನಟೇಶ್ ಎಸ್. ಎಂ., ಪ್ರಾಂಶುಪಾಲರು | ಸದಸ್ಯರು |
| 16. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ಶ್ರೀ ರಾಜಶೇಖರ ಪಿ. ಬಿ. ಪ್ರಾಂಶುಪಾಲರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:

ಯಾರು ಇರುವುದಿಲ್ಲ.

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು.

ಮೊದಲು ಅಜೆಂಡಾದ ಪ್ರಕಾರ ವಿಷಯಗಳನ್ನು ತೆಗೆದುಕೊಂಡು ನಂತರ ಉಳಿದ ವಿಷಯಗಳನ್ನು ಚರ್ಚೆ ಮಾಡೋಣ ಎಂದರು ಇದಕ್ಕೆ ಎಲ್ಲ ಸದಸ್ಯರು ಒಪ್ಪಿದರು.

## ಪ್ರಾಧಿಕಾರಗಳ ವಿಭಾಗ

**2022–ಸಿಂ–2.01 :** 31ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡುವ ಬಗ್ಗೆ.

**ಚರ್ಚೆ :** ಕುಲಸಚಿವರು ವಿಷಯ ಪ್ರಸ್ತಾಪಿಸಿ, ವಿಶ್ವವಿದ್ಯಾಲಯದ ಘಟಿಕೋತ್ಸವ ಎರಡು ವರ್ಷಗಳಿಂದ ನಡೆಯದೇ ಇರುವುದರಿಂದ ತುರ್ತಾಗಿ ನಡೆಸಬೇಕಿದ್ದು ಸದರಿ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ನೀಡಲು ಕೋರಿ ವಿಶ್ವವಿದ್ಯಾಲಯಕ್ಕೆ 18 ಅರ್ಜಿಗಳು ಬಂದಿದ್ದು, ಅವುಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳನ್ನು ಶಿಫಾರಸ್ಸು ಮಾಡಲು ಘನತೆವೆತ್ತ ರಾಜ್ಯಪಾಲರು ಮೂರು ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಿರುತ್ತಾರೆ. ಸದರಿ ಸಮಿತಿಯು ಈಗಾಗಲೇ ಒಂದು ಸಭೆ ನಡೆಸಿದ್ದು, ಆ ಸಮಿತಿಗೆ ಅರ್ಜಿಗಳನ್ನು ಸಲ್ಲಿಸಿದಾಗ ಸಮಿತಿಯ ಅಧ್ಯಕ್ಷರು ಸದರಿ ಅರ್ಜಿಗಳು ನೇರವಾಗಿ ಕುಲಪತಿಗಳ ಕಛೇರಿಯಿಂದ ಬಂದಿದ್ದು, ಈ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆಯಾದ ನಂತರ ಸಮಿತಿಗೆ ನೀಡುವಂತೆ ತಿಳಿಸಿರುವುದರಿಂದ ಈ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಘಟಿಕೋತ್ಸವದಲ್ಲಿ ಎಷ್ಟು ಜನಕ್ಕೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಬಹುದು ಎಂದು ಕೇಳಿದರು.

ಕುಲಸಚಿವರು ಮಾತನಾಡಿ ನಿಯಮಾನುಸಾರ 03 ಜನಕ್ಕೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಬಹುದು, ಅರ್ಹ ಅಭ್ಯರ್ಥಿಗಳಿಲ್ಲದೇ ಇದ್ದಲ್ಲಿ ಪ್ರದಾನ ಮಾಡದೇ ಇರಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಅಶೋಕ್ ಡಿ.ರೇವಣಕರ್ ರವರು ಮಾತನಾಡಿ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಗೌರವ ಡಾಕ್ಟರೇಟ್ ಪರಿಶೀಲನಾ ಸಮಿತಿಗೆ ಕಳುಹಿಸಿಕೊಡಬಹುದು ಎಂದು ಹೇಳಿದರು. ಕುಲಸಚಿವರು ಮುಂದುವರೆದು ಮಾತನಾಡಿ ಅರ್ಜಿಗಳನ್ನು ಸಮಿತಿಗೆ ಕಳುಹಿಸಿಕೊಡಲು ಸಭೆಯು ಅನುಮೋದನೆ ನೀಡಿದಲ್ಲಿ ಉದ್ಧೃತ ಭಾಗದೊಂದಿಗೆ ಅರ್ಜಿಗಳನ್ನು ಗೌರವ ಡಾಕ್ಟರೇಟ್ ಪರಿಶೀಲನಾ ಸಮಿತಿಗೆ ಕಳುಹಿಸಿಕೊಡಬೇಕಾಗಿದೆ, ಈಗಾಗಲೇ ಘಟಿಕೋತ್ಸವ ವಿಳಂಬವಾಗಿದ್ದು, ಸದನದಲ್ಲೂ ಈ ಬಗ್ಗೆ ಚರ್ಚೆಯಾಗಿದೆ. ಆದ್ದರಿಂದ ತಕ್ಷಣ ಕ್ರಮಕೈಗೊಳ್ಳಬೇಕಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ಆದಷ್ಟು ಬೇಗ ಘಟಿಕೋತ್ಸವ ನಡೆಸಲು ಕ್ರಮ ಕೈಗೊಳ್ಳಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ರವರು ಮಾತನಾಡಿ ಈಗಾಗಲೇ ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿ ಆಗಮಿಸಬೇಕೆಂದು ಆಹ್ವಾನಿಸಿರುವ ಕೇಂದ್ರ ಸರ್ಕಾರದ ಮಾನ್ಯ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರನ್ನು ಕೂಡಲೇ ಸಂಪರ್ಕಿಸಿ ಅವರ ಅನುಮತಿ ದೊರೆತಲ್ಲಿ ಖುದ್ದಾಗಿ ಅಥವಾ ಆನ್–ಲೈನ್‌ನ ಮೂಲಕ ಭಾಗವಹಿಸುವುದಾದರೆ ಅವರ ಸಂದೇಶವನ್ನು ಪಡೆಯುವುದು. ಒಂದು ವೇಳೆ ಸಮಯದ ಅಭಾವದಿಂದ ಅವರು ಭಾಗವಹಿಸಲು ಸಾಧ್ಯವಾಗದೇ ಹೋದರೆ ಅವರನ್ನು ಮುಂದಿನ ಘಟಿಕೋತ್ಸವಕ್ಕೆ ಆಹ್ವಾನಿಸಬಹುದು. ಈಗ ಪ್ರಸ್ತುತ ತುರ್ತು ಇರುವುದರಿಂದ ನಮ್ಮ ರಾಜ್ಯದಲ್ಲೇ ಇರುವ ಯುಜಿಸಿ ನಾಮ ನಿರ್ದೇಶಿತರು ಅಥವಾ ಬೇರೆ ಯಾರನ್ನಾದರೂ ಕರೆಸಬಹುದು ಒಟ್ಟಿನಲ್ಲಿ ಇನ್ನು ಒಂದು ವಾರದೊಳಗೆ ಘಟಿಕೋತ್ಸವ ಮಾಡಬೇಕು ಎಂದು ಹೇಳಿದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಈಗಾಗಲೇ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರನ್ನು ಸಂಪರ್ಕಿಸಿರುವುದರಿಂದ ಅವರ ಒಪ್ಪಿಗೆಗಾಗಿ ಪದೇ ಪದೇ ಅವರ ಕಛೇರಿಗೆ ಪತ್ರ / ಮೆಸೇಜ್ ಮಾಡಲಾಗಿದೆ ಅವುಗಳಿಗೆ ಒಂದಕ್ಕೂ ಉತ್ತರ ಬಂದಿಲ್ಲ, ಭಾಗವಹಿಸಲು ಆಗುವುದಿಲ್ಲ ಎಂದು ಉತ್ತರ ಬಂದಿದ್ದರೆ ಬೇರೆ ಕ್ರಮ ಕೈಗೊಳ್ಳಬಹುದಿತ್ತು, ಏನೂ ಉತ್ತರ ಬರದಿದ್ದರೆ ಏನು ಮಾಡುವುದು ಎಂದು ಕೇಳಿದರು.

ಕುಲಸಚಿವರು ಮಾತನಾಡಿ ರಾಜ್ಯಪಾಲರಿಗೆ ಪತ್ರ ಬರೆದು ಎರಡು ವರ್ಷಗಳಿಂದ ಘಟಿಕೋತ್ಸವ ನಡೆಸಲು ಸಾಧ್ಯವಾಗಿರುವುದಿಲ್ಲ, ಅತಿಥಿಗಳನ್ನು ಆಹ್ವಾನಿಸುವುದರಲ್ಲೂ ವಿಳಂಬವಾಗುತ್ತಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಕ್ಷಣ ಘಟಿಕೋತ್ಸವ ನಡೆಸಬೇಕಾಗಿದ್ದು, ಕರ್ನಾಟಕಲ್ಲೇ ಇರುವ ಶಿಕ್ಷಣ ತಜ್ಞರು ಅಥವಾ ಇತರೆ ವ್ಯಕ್ತಿಗಳನ್ನು ಕರೆಸಿ ಘಟಿಕೋತ್ಸವ ನಡೆಸಲು ಅನುಮತಿ ನೀಡಬೇಕೆಂದು ಕೋರಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ಶ್ರೀ ಶಿವನ್, ಇಸ್ರೋ ಮಾಜಿ ಅಧ್ಯಕ್ಷರು, ಇವರನ್ನು ಕರೆಸಬಹುದು ಎಂದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಈಗ ತುರ್ತು ಇರುವುದರಿಂದ ಒಂದು ವಾರದಲ್ಲಿ ಘಟಿಕೋತ್ಸವ ಮಾಡಬೇಕಾಗಿದೆ ಮುಂದಿನ ಘಟಿಕೋತ್ಸವಕ್ಕೆ ಆದರೂ ತಾವು ಅತಿಥಿಯಾಗಿ ಬರಬೇಕು ಎಂಬುದು ವಿಶ್ವವಿದ್ಯಾಲಯದ ಅಪೇಕ್ಷೆಯಾಗಿದೆ ಎಂದು ಕೇಂದ್ರ ಸರ್ಕಾರದ ಮಾನ್ಯ ಹಣಕಾಸು ಸಚಿವರಿಗೆ ಪತ್ರ ಬರೆಯಬಹುದು ಹಾಗೂ ಬೇರೆಯವರನ್ನು ಆಹ್ವಾನಿಸುವ ಕುರಿತು ಅನುಮತಿಗಾಗಿ ಘನತೆವೆತ್ತ ರಾಜ್ಯಪಾಲರಿಗೂ ಪತ್ರ ಬರೆಯಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ತಮ್ಮ ಕಛೇರಿಯಿಂದ ಅಧಿಕೃತವಾದ ಸಂದೇಶ ಬರದ ಕಾರಣ ಗೊಂದಲವಾಗಿದೆ ತಮ್ಮ ಅಮೂಲ್ಯ ಸಮಯವನ್ನು ಪಡೆಯುವುದರಲ್ಲಿ ನಾವು ವಿಫಲರಾಗಿದ್ದೇವೆ ಎಂದು ಅವರಿಗೆ ಬೇಸರವಾಗದ ರೀತಿಯಲ್ಲಿ ಪತ್ರ ಬರೆಯಿರಿ ಎಂದು ಹೇಳಿದರು.

ಶ್ರೀ ಶಿವನ್‌ರವರನ್ನು ಕರೆಸಬಹುದು ಎಂಬುದಕ್ಕೆ ಎಲ್ಲ ಸದಸ್ಯರೂ ಸಹಮತ ವ್ಯಕ್ತಪಡಿಸಿದರು. ಆದರೆ ಮಾನ್ಯ ಕುಲಪತಿಗಳು ಮಾತನಾಡಿ ಈಗಾಗಲೇ ಘನತೆವೆತ್ತ ರಾಜ್ಯಪಾಲರ ಕಛೇರಿಯಿಂದ ಬಂದಿರುವ ಪಟ್ಟಿಯಲ್ಲಿ ಇನ್ನೊಬ್ಬ ಅತಿಥಿಯಾದ ಶ್ರೀ ಅಜೀಂ ಪ್ರೇಮ್‌ಜಿ ಅವರ ಹೆಸರು ಇದೆ ಎಂದರು.

ಚರ್ಚೆಯ ನಂತರ ಶ್ರೀ ಅಜೀಂ ಪ್ರೇಮ್ ಜಿ, ಶ್ರೀ ಶಿವನ್ ಮತ್ತು ಶ್ರೀ ಎಂ.ಕೆ. ಶ್ರೀಧರ್ ಇವರುಗಳ ಪಟ್ಟಿಯನ್ನು ಘನತೆವೆತ್ತ ರಾಜ್ಯಪಾಲರ ಕಛೇರಿಗೆ ಕಳುಹಿಸಿ ಸದರಿ ಪಟ್ಟಿಯಲ್ಲಿನ ಒಬ್ಬರನ್ನು ಕರೆಸಿ ಘಟಿಕೋತ್ಸವ ನಡೆಸಲು ಅನುಮೋದನೆ ನೀಡಬೇಕೆಂದು ಕೋರಲು ನಿರ್ಣಯಿಸಲಾಯಿತು.

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಗೌರವ ಡಾಕ್ಟರೇಟ್ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸಭೆಗೆ ಮಂಡಿಸಿ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ರವರು ಮಾತನಾಡಿ ಗೌರವ ಡಾಕ್ಟರೇಟ್ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹರ ಪಟ್ಟಿಯನ್ನು ಪರಿಶೀಲನಾ ಸಮಿತಿಗೆ ಕಳುಹಿಸಿಕೊಡುವ ಅವಕಾಶ ಸಭೆಗೆ ಇದೆ, ಆದ್ದರಿಂದ ಬಂದಿರುವಂತಹ 19 ಅರ್ಜಿಗಳನ್ನು ರಾಜ್ಯಪಾಲರು ನೇಮಿಸಿದಂತಹ ಗೌರವ ಡಾಕ್ಟರೇಟ್ ಪರಿಶೀಲನಾ ಸಮಿತಿಗೆ ಕಳುಹಿಸಲು ಅನುಮೋದಿಸಬಹುದು ಎಂದು ಹೇಳಿದರು.

ನಿರ್ಣಯ : ಸುಧೀರ್ಘ ಚರ್ಚೆಯ ನಂತರ ಪ್ರಸ್ತುತ ಗೌರವ ಡಾಕ್ಟರೇಟ್ ಕೋರಿ ಸ್ವೀಕೃತವಾಗಿರುವ 18 ಅರ್ಜಿಗಳೊಂದಿಗೆ ಶ್ರೀ ಭಾ.ಮ. ಶ್ರೀಕಂಠಯ್ಯ, ಇವರ ಅರ್ಜಿಯನ್ನು ಸೇರಿಸಿ ಒಟ್ಟು 19 ಅರ್ಜಿಗಳನ್ನು ಗೌರವ ಡಾಕ್ಟರೇಟ್ ಪರಿಶೀಲನಾ ಸಮಿತಿಗೆ ನೀಡಲು ಸಭೆಯು ಅನುಮೋದನೆ ನೀಡಿತು. ಇನ್ನು ಮುಂದೆ ಘಟಿಕೋತ್ಸವದ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ಪೂರ್ವಭಾವಿಯಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆಯಾದ ನಂತರವೇ ಗೌರವ ಡಾಕ್ಟರೇಟ್ ಪರಿಶೀಲನಾ ಸಮಿತಿಗೆ ನೀಡುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು.

ಮುಂದುವರೆದು ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಹಿಂದಿನ ಎರಡು ಸಭೆಗಳ ನಡಾವಳಿಗಳು ನಮಗೆ ಬಂದಿಲ್ಲ, ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಸ್ಥಿರೀಕರಣಕ್ಕೆ ಇಡದೇ ಮುಂದಿನ ಸಭೆ ನಡೆಸುವುದು ಸರಿಯಾದ ಕ್ರಮವಲ್ಲ.

ಕುಲಸಚಿವರು ಮಾತನಾಡಿ ಮೂರೂ ಸಭೆಗಳ ನಡಾವಳಿಗಳನ್ನು ಅನುಮೋದನೆಗಾಗಿ ಮಾನ್ಯ ಕುಲಪತಿಗಳಿಗೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಮಾನ್ಯಕುಲಪತಿಗಳು ಮಾತನಾಡಿ ನಾನು ಅನ್ಯಕಾರ್ಯ ನಿಮಿತ್ತ ಕಛೇರಿಯಲ್ಲಿರದ ಕಾರಣ ವಿಳಂಬವಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಪ್ರಸ್ತುತ ಇಂದಿನ ಸಭೆಗೆ ಈ ಹಿಂದಿನ ಸಭೆಗಳ ನಡಾವಳಿಗಳು ಬೇಕೇ ಬೇಕು. ಆದ್ದರಿಂದ ನಡಾವಳಿಗಳನ್ನು ತರಿಸಿ ಸಭೆಗೆ ಮಂಡಿಸಿ ಎಂದು ಹೇಳಿದರು.

ಮಾನ್ಯಕುಲಪತಿಗಳ ಆಪ್ತಕಾರ್ಯಾಲಯದಿಂದ ಮೂರು ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸಭೆಗೆ ಮಂಡಿಸಲಾಯಿತು.

ಕುಲಸಚಿವರು ದಿನಾಂಕ:27-10-2021ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಭೆಯಲ್ಲಿ ಓದಿದರು. ಸಭೆಯು ಅನುಮೋದಿಸಿದ್ದರಿಂದ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

ನಂತರ ದಿನಾಂಕ:28-02-2022ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯಗಳನ್ನು ಕುಲಸಚಿವರು ಸಭೆಯಲ್ಲಿ ಓದಿದರು ಸಭೆಯ ಒಪ್ಪಿಗೆಯ ಮೇರೆಗೆ ಸದರಿ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

ನಂತರ ದಿನಾಂಕ:08-03-2022ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯಗಳನ್ನು ಕುಲಸಚಿವರು ಸಭೆಯಲ್ಲಿ ಓದಿದರು.

ಸದಸ್ಯರಾದ ಶ್ರೀ ಅಶೋಕ್ ಡಿ. ರೇವಣ್‌ಕರ್ ಇವರು ಮಾತನಾಡಿ 2022-ಸಿಂ-1.02(ಸಿ): ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಮತ್ತು ಸಂಭಾವನೆ ಪರಿಷ್ಕರಣೆ ಕುರಿತಂತೆ ರಚಿಸಲಾದ ಸಮಿತಿಯ ಸಭೆಯ ನಡಾವಳಿಯನ್ನು ಜಾರಿಗೆ ತರುವ ನಿರ್ಣಯದಲ್ಲಿ ಅತಿಥಿ ಉಪನ್ಯಾಸಕರಿಗೆ ಸರ್ಕಾರವೇ ಹತ್ತು ತಿಂಗಳು ವೇತನ ನೀಡುತ್ತಿದೆ ಸರ್ಕಾರದ ನಿಯಮಗಳನ್ನು ಮೀರಿ ವಿಶ್ವವಿದ್ಯಾಲಯವು 12 ತಿಂಗಳು ವೇತನ ನೀಡುವುದು ನಿಯಮಾನುಸಾರ ಸರಿಯಾದ ಕ್ರಮವಲ್ಲ, ಮುಂದೆ ಅತಿಥಿ ಉಪನ್ಯಾಸಕರು ತಮ್ಮನ್ನು ಖಾಯಂ ಮಾಡಿ ಎಂದು ಕೇಳಬಹುದು ಮುಷ್ಕರ ಮಾಡಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ನಟೇಶ್‌ರವರು ಮಾತನಾಡಿ ಶ್ರೀ ಅಶೋಕ್ ಡಿ. ರೇವಣ್‌ಕರ್ ಸರ್ ಹೇಳಿದ್ದು ಸರಿ ಇದೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇದನ್ನೇ ಹೇಳಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ, ಸರ್ಕಾರಿ ಕಾಲೇಜುಗಳೇ ಬೇರೆ, ವಿಶ್ವವಿದ್ಯಾಲಯವೇ ಬೇರೆ, ವಿಶ್ವವಿದ್ಯಾಲಯದಲ್ಲಿ 12 ತಿಂಗಳು ವೇತನ ನೀಡಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಶ್ರೀ ಅಶೋಕ್ ಡಿ. ರೇವಣ್‌ಕರ್ ಇವರ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಎಲ್ಲ ಅತಿಥಿ ಉಪನ್ಯಾಸಕರು ಅರ್ಹತೆಯನ್ನು ಹೊಂದಿದ್ದಾರೆ, ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಾರೆ ಪರಿಶ್ರಮಕ್ಕೆ ತಕ್ಕಂತೆ ವೇತನ ನೀಡುವುದು ತಪ್ಪಲ್ಲ, ಒಂದು ದಿನಕ್ಕೆ ಮಾತ್ರ ಬಿಡುಗಡೆ ಮಾಡಿ ಪುನ: ನೇಮಕ ಮಾಡಿಕೊಂಡು 12 ತಿಂಗಳು ವೇತನ ಕೊಡಬೇಕು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಅತಿಥಿ ಉಪನ್ಯಾಸಕರಿಗೆ ವೇತನ ಇತರೆ ಸೌಲಭ್ಯಗಳ ಕುರಿತು ಸರ್ಕಾರದ ಯಾವ ನಿಯಮಗಳನ್ನು ಅನುಸರಿಸುತ್ತದೆಯೋ ನಾವೂ ಅದೇ ನಿಯಮಗಳನ್ನು ಅನುಸರಿಸೋಣ, ಸಂಪನ್ಮೂಲದ ಕೊರತೆ ಇರುವುದರಿಂದ ವಿಶ್ವವಿದ್ಯಾಲಯಕ್ಕೂ ಹೊರೆಯಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ್‌ರವರು ಮಾತನಾಡಿ ನಾವು ಈ ವಿಷಯವನ್ನು ಸರ್ಕಾರಕ್ಕೂ ತೆಗೆದುಕೊಂಡು ಹೋಗುತ್ತೇವೆ, ಸರ್ಕಾರದ ಅನುಮತಿಯನ್ನು ಕೋರುತ್ತೇವೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಅತಿಥಿ ಉಪನ್ಯಾಸಕರಿಗೆ ಹತ್ತು ವರ್ಷಗಳಿಂದ ವೇತನ ಹೆಚ್ಚಿಸಿಲ್ಲ, ಈಗ ಹೆಚ್ಚಿಸಬೇಕು ಎಂದರೆ ಆರ್ಥಿಕ ಹೊರೆ ಆಗೇ ಆಗುತ್ತದೆ ಎಂದರು. ಮುಂದುವರೆದು ದಿನಾಂಕ:22-03-2022ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಈ ವಿಷಯದ ಕುರಿತು ಚರ್ಚೆಯಾಗಿದೆ, ಸಭೆಯಲ್ಲಿ ಭಾಗವಹಿಸಿದ್ದ ಸರ್ಕಾರದ ಹಣಕಾಸು ಸಚಿವಾಲಯದ ಅಧಿಕಾರಿಗಳು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ವೆಚ್ಚ ಭರಿಸಲು ತಮಗೆ ಹೇಗೆ ಬೇಕೋ ಹಾಗೆ ಯೋಜನೆ ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

ಹಣಕಾಸು ಅಧಿಕಾರಿಗಳನ್ನು ಸಭೆಗೆ ಕರೆಸಬೇಕೆಂದು ನಿರ್ಣಯವಾದ್ದರಿಂದ ಸಭೆಗೆ ಕರೆಸಲಾಯಿತು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮುಂದುವರೆದು ಮಾತನಾಡಿ ಸರ್ಕಾರದ ಹಣಕಾಸು ಸಚಿವಾಲಯದ ಅಧಿಕಾರಿಗಳು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ವೆಚ್ಚ ಭರಿಸಲು ತಮಗೆ ಹೇಗೆ ಬೇಕೋ ಹಾಗೆ ಯೋಜನೆ ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ ಅಲ್ಲವೇ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಈಗಾಗಲೇ ಹತ್ತು ಕೋಟಿ ಕೊರತೆ ಬಜೆಟ್ ಇದೆ ಅದನ್ನು ಸರಿದೂಗಿಸುವುದೇ ಕಷ್ಟವಾಗುತ್ತಿದೆ ಎಂದರು.

ಸದಸ್ಯರಾದ ಡಾ. ಬಿ.ಜಿ. ಧನಂಜಯ್‌ರವರು ಮಾತನಾಡಿ ಅತಿಥಿ ಉಪನ್ಯಾಸಕರಿಗೆ ವೇತನ ಇತರೆ ಸೌಲಭ್ಯಗಳನ್ನು ನೀಡಿದಲ್ಲಿ ಎಷ್ಟು ಹೆಚ್ಚುವರಿ ಬಜೆಟ್ ಬೇಕಾಗುತ್ತದೆ ಎಂಬ ಬಗ್ಗೆ ಸರಿಯಾದ ಅಂಕಿ ಅಂಶಗಳ ಮಾಹಿತಿ ಅವಶ್ಯಕತೆ ಇರುತ್ತದೆ. ಎಷ್ಟು ವಿಭಾಗಗಳಿವೆ, ಎಷ್ಟು ಕಾರ್ಯಭಾರ ಇದೆ, ಹಾಗೂ ಎಷ್ಟು ಅತಿಥಿ ಉಪನ್ಯಾಸಕರ ಅವಶ್ಯಕತೆ ಇದೆ ಎಂಬುದನ್ನು ಪರಿಶೀಲಿಸಿ ಪಟ್ಟಿ ತಯಾರಿಸಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಕುಲಪತಿಗಳ ಹುದ್ದೆಗೆ ಆಯ್ಕೆಯಾಗುವವರು ವಿಶ್ವವಿದ್ಯಾಲಯದ ಉನ್ನತಿ ಹೇಗೆ ಮಾಡಬೇಕೆಂಬ ಬಗ್ಗೆ ವಿಷನ್ ಇಟ್ಟುಕೊಂಡು ಬರಬೇಕು. ವಿಶ್ವವಿದ್ಯಾಲಯ ಎಂದರೆ ವಿದ್ಯಾರ್ಥಿಗಳು, ಬೋಧನೆ ಮತ್ತು ಪರೀಕ್ಷೆ ಇವು ಮುಖ್ಯ ಧ್ಯೇಯವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವವರಿಗೆ ಸರಿಯಾಗಿ ವೇತನ ಕೊಡಬೇಕಾಗುತ್ತದೆ. ಬಜೆಟ್‌ನಲ್ಲಿ ಇದನ್ನು ಸರಿಯಾಗಿ ಸೂಚಿಸಿ ಸರ್ಕಾರದಿಂದ ಅನುದಾನ ತರಬೇಕು. ಹಣಕಾಸು ಸಮಿತಿ ಸಭೆಯಲ್ಲಿ ಬಜೆಟ್ ಅನುಮೋದನೆಗಾಗಿ ಸಲ್ಲಿಸುವ ಮುಂಚಿತವಾಗಿ, ವಿಶ್ವವಿದ್ಯಾಲಯದಲ್ಲಿ ಪೂರ್ವಭಾವಿ ಸಭೆ ನಡೆಸಿ ಚರ್ಚೆ ನಡೆಸಬೇಕಾಗಿತ್ತು. ಅದನ್ನು ಮಾಡಿಲ್ಲ, ವಿಶ್ವವಿದ್ಯಾಲಯದ ದೂರ ಶಿಕ್ಷಣದ 14600 ವಿದ್ಯಾರ್ಥಿಗಳಿಂದ ಶುಲ್ಕ ಬರಬೇಕಾಗಿದೆ ಎಂಬ ಮಾಹಿತಿಯಿದೆ ಅದರ ಬಗ್ಗೆಯೂ ಗಮನ ವಹಿಸಬೇಕು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ದೂರ ಶಿಕ್ಷಣದ 14600 ವಿದ್ಯಾರ್ಥಿಗಳಿಂದ ಶುಲ್ಕ ಪಾವತಿಯಾಗಬೇಕು ಎಂಬ ವಿಷಯದ ಕುರಿತು ಕೂಡಲೇ ದೂರಶಿಕ್ಷಣ ವಿಭಾಗದಿಂದ ಮಾಹಿತಿಯನ್ನು ಪಡೆಯುವಂತೆ ಹಣಕಾಸು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸದಸ್ಯರಾದ ಬಿ. ನಿರಂಜನಮೂರ್ತಿಯವರು ಮಾತನಾಡಿ ಈಗಾಗಲೇ ಸಿಂಡಿಕೇಟ್ ಸಭೆಯ ನಿರ್ಣಯ ಆಗಿದೆ ಅದನ್ನು ಜಾರಿಗೆ ತರಬೇಕು ಎಂದು ಹೇಳಿದರು. ಶ್ರೀ ಸಂತೋಷ್ ಬಳ್ಳೇಕೆರೆಯವರು ಸಹ ಇದನ್ನು ಅನುಮೋದಿಸಿದರು.

ಹಣಕಾಸು ಅಧಿಕಾರಿಗಳು ಹೀಗೆ ಮಾಡಿದಲ್ಲಿ 2-3 ತಿಂಗಳು ಮಾತ್ರ ವೇತನ ಕೊಡಬಹುದು ನಂತರ ಕೊಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳು ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ, ವಿಶ್ವವಿದ್ಯಾಲಯದಲ್ಲಿ ಆಂತರಿಕ ಸಂಪನ್ಮೂಲಗಳನ್ನು ಹೇಗೆ ಕ್ರೋಢೀಕರಿಸಬೇಕು ಅನಗತ್ಯ ವೆಚ್ಚಗಳನ್ನು ಹೇಗೆ ಕಡಿತಗೊಳಿಸಬೇಕು ಎಂಬ ಬಗ್ಗೆ ಪ್ರತಿ ತಿಂಗಳು ಸಭೆ ಸೇರಿ ಚರ್ಚಿಸಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಎಷ್ಟು ಮಂಜೂರಾದ ಹುದ್ದೆಗಳಿವೆ? ಈ ಹುದ್ದೆಗಳಿಗೆದುರಾಗಿ ಎಷ್ಟು ಹೊರಗುತ್ತಿಗೆ ನೌಕರರು ಕೆಲಸ ನಿರ್ವಹಿಸುತಿದ್ದಾರೆ, ಹೆಚ್ಚುವರಿ ಎಷ್ಟು ಜನ ಇದ್ದಾರೆ ಎಂಬ ಮಾಹಿತಿ ತಕ್ಷಣ ತೆಗೆದುಕೊಳ್ಳಬೇಕು, ಇದು ವಿಶ್ವವಿದ್ಯಾಲಯಕ್ಕೆ ಹೊರೆಯಾಗಿದೆ ಎಂದು ಹೇಳಿದರು. ಶ್ರೀ ಬಿ. ನಿರಂಜನಮೂರ್ತಿಯವರು ಹಾಗೂ ಶ್ರೀ ಹೆಚ್. ರಾಮಲಿಂಗಪ್ಪರವರು ಇದಕ್ಕೆ ಧ್ವನಿಗೂಡಿಸಿದರು.

ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿರುವ ಖಾಯಂ ಸಿಬ್ಬಂದಿಗಳಿಗೆ ಕಂಪ್ಯೂಟರ್ ಜ್ಞಾನ ಇದೆ. ಎಷ್ಟು ಹುದ್ದೆ ಭರ್ತಿಯಾಗಿಲ್ಲ ಈ ಹುದ್ದೆಗಳಿಗೆದುರಾಗಿ ಎಷ್ಟು ಹೊರಗುತ್ತಿಗೆ ನೌಕರರು ಕೆಲಸ ನಿರ್ವಹಿಸುತಿದ್ದಾರೆ, ಹೆಚ್ಚುವರಿ ಎಷ್ಟು ಜನ ಇದ್ದಾರೆ ಎಂಬ ಮಾಹಿತಿಯನ್ನು ಸಭೆಗೆ ಮಂಡಿಸಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ವಿಶ್ವವಿದ್ಯಾಲಯ ಪ್ರಾರಂಭವಾದಾಗಿನಿಂದಲೂ ಕೆಲವರು ಕರ್ತವ್ಯ ನಿರ್ವಹಿಸುತಿದ್ದಾರೆ, ಅವರನ್ನು ಕೆಲಸದಿಂದ ಈಗ ತೆಗೆಯವುದು ಸರಿಯಲ್ಲ ಇತ್ತೀಚೆಗೆ ಯಾರು ಸೇರಿದ್ದಾರೆ ಅವರನ್ನು ಬಿಡುಗಡೆ ಮಾಡಬಹುದು ಎಂದರು.

ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ವಿಶ್ವವಿದ್ಯಾಲಯ ಯಾರನ್ನೂ ನೇರವಾಗಿ ನೇಮಕ ಮಾಡಿಕೊಂಡಿಲ್ಲ ಏಜೆನ್ಸಿ ಮುಖಾಂತರ ನೇಮಕವಾಗಿರುತ್ತಾರೆ ಎಂದರು.
ಶ್ರೀ ಸಂತೋಷ್ ಬಳ್ಳೇಕೆರೆಯವರು ಯಾರಿಂದಲಾದರೂ ನೇಮಕವಾಗಲಿ ಆದರೆ ತೆಗೆಯಲೇಬೇಕು ಎಂದರು.

ಕುಲಸಚಿವರು ಮಾತನಾಡಿ ಸರ್ಕಾರದ ಸುತ್ತೋಲೆ ದಿನಾಂಕ:06-04-2021 ರ ಪ್ರಕಾರ ಹೆಚ್ಚುವರಿ ಹೊರಗುತ್ತಿಗೆ ತೆಗೆದುಕೊಂಡ ಪಕ್ಷದಲ್ಲಿ ಈ ಕೂಡಲೇ ಬಿಡುಗಡೆ ಮಾಡುವುದು ಇಲ್ಲದಿದ್ದಲ್ಲಿ ವಿಶ್ವವಿದ್ಯಾಲಯದ ಆಡಳಿತದ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಇರುತ್ತದೆ. ವಿಶ್ವವಿದ್ಯಾಲಯದಲ್ಲಿ ನಿಯಮಾನುಸಾರ ಯಾವುದೇ ಆಡಳಿತಾತ್ಮಕ ಕ್ರಮ ಕೈಗೊಂಡರೂ ನೌಕರರು ಮುಷ್ಕರ ಹೂಡುತ್ತಾರೆ ಆಗ ಸಿಂಡಿಕೇಟ್ ಸದಸ್ಯರೆಲ್ಲರೂ ಆಡಳಿತದ ಪರವಾಗಿ ಇರಬೇಕು ಎಂದು ಹೇಳಿದರು.

ಶ್ರೀ ಸಂತೋಷ್ ಬಳ್ಳೇಕೆರೆಯವರು ಖಂಡಿತ ಆಡಳಿತಾಂಗದ ಪರವಾಗಿಯೇ ಇರುತ್ತೇವೆ ಎಂದು ಹೇಳಿದರು. ಶ್ರೀ ರಮೇಶಬಾಬುರವರೂ ಇದಕ್ಕೆ ಸಹಮತ ವ್ಯಕ್ತಪಡಿಸಿದರು. ಶ್ರೀ ಸಂತೋಷ್ ಬಳ್ಳೇಕೆರೆಯವರು ಇಂತಹ ವಿಷಯಗಳಲ್ಲಿ ಸರಿಯಾಗಿ ನಿರ್ಣಯ ತೆಗೆದುಕೊಳ್ಳದಿದ್ದರೆ ವಿಶ್ವವಿದ್ಯಾಲಯದ ಹಣಕಾಸು ಪರಿಸ್ಥಿತಿ ಸುಧಾರಿಸುವುದು ಹೇಗೆ ಎಂದು ಕೇಳಿದರು.

ಸದಸ್ಯರಾದ ಶ್ರೀ ಹೆಚ್ ರಾಮಲಿಂಗಪ್ಪರವರು ಮಾತನಾಡಿ ಸರ್ಕಾರದಿಂದ ಆದೇಶ ಬಂದಿರುವುದರಿಂದ ಹಂತ ಹಂತವಾಗಿ ತೆಗೆಯಬಹುದು ಎಂದು ಹೇಳಿದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಸಾಧ್ಯವಾದರೆ ಎಲ್ಲರನ್ನೂ ಉಳಿಸಿಕೊಳ್ಳಿ ಇಲ್ಲವಾದರೆ ತೆಗೆಯಲೇಬೇಕಾದರೆ ಇತ್ತೀಚೆಗೆ ಬಂದವರನ್ನು ಮೊದಲು ತೆಗೆಯಬಹುದು ಎಂದು ಹೇಳಿದರು. ಅಂತಿಮವಾಗಿ ಈಗಾಗಲೇ ಈ ಬಗ್ಗೆ ಪರಿಶೀಲಿಸಲು ಸಮಿತಿ ರಚನೆಯಾಗಿರುವುದರಿಂದ ಸದರಿ ಸಮಿತಿ ಶೀಘ್ರವಾಗಿ ಸಭೆ ಸೇರಿ ವರದಿ ಸಿದ್ಧಪಡಿಸುವಂತೆ, ಹಾಗೂ ಈ ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು. ಸದಸ್ಯರಾದ ಶ್ರೀ ಧರ್ಮಪ್ರಸಾದ್ ರವರು ಮಾತನಾಡಿ ಒಟ್ಟಿನಲ್ಲಿ ಅತಿಥಿ ಉಪನ್ಯಾಸಕರಿಗೆ ವೇತನ ಇತರೆ ಸೌಲಭ್ಯಗಳ ಕುರಿತು ಸಮಿತಿಯ ವರದಿಯ ಕುರಿತು ಸಿಂಡಿಕೇಟ್ ಸಭೆ ತೆಗೆದುಕೊಂಡ ನಿರ್ಣಯಗಳು ಯಥಾವತ್ತಾಗಿ 2022ರ ಏಪ್ರಿಲ್ ಮಾಹೆಯಿಂದ ಜಾರಿಗೆ ಬರಬೇಕು, ಸಮಿತಿಯ ಶಿಫಾರಸ್ಸುಗಳನ್ನು ಆದೇಶದಲ್ಲಿಯೂ ನಮೂದಿಸಬೇಕು ಎಂದು ಕೋರಿದರು. ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯವು ಕೆಲವೊಂದು ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡಬೇಕೆಂದು ಮನವಿ ಮಾಡಿದರು.

ಸದಸ್ಯರಾದ ಶ್ರೀ ಅಶೋಕ್ ಡಿ.ರೇವಣ್‌ಕರ್ ಇವರು ಮಾತನಾಡಿ ಸಭೆಯಲ್ಲಿ ಚರ್ಚಿಸಲು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಬಹಳಷ್ಟು ವಿಷಯಗಳಿವೆ, ವಿದ್ಯಾರ್ಥಿಗಳ ಶುಲ್ಕ ಬಗ್ಗೆ ಹಾಗೂ ಪರೀಕ್ಷಾ ಅವಧಿ 2 ರಿಂದ 3 ಗಂಟೆಯವರೆಗೆ ಮಾಡಬೇಕೆಂಬ ಬೇಡಿಕೆ ಇದೆ ಎಂದರು. ಪ್ರೊ ರಿಯಾಜ್ ಮಹಮೂದ್‌ರವರು ಮಾತನಾಡಿ 2 ಗಂಟೆ ಎಂದು ಎನ್.ಇ.ಪಿ. ವಿನಿಯಮಗಳಲ್ಲೇ ಇದೆ, ಎಲ್ಲಾ ಪದವಿಗಳಿಗೂ ಏಕ ರೀತಿಯ ನಿಯಮ ಜಾರಿಗೆ ಬಂದಿದೆ, ಏನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಪ್ರಶ್ನೆ ಪತ್ರಿಕೆ ಸಿದ್ದಪಡಿಸುವವರು ಅವಧಿಗೆ ತಕ್ಕಂತೆ ಪ್ರಶ್ನೆಗಳನ್ನು ಕೊಟ್ಟು ಅದನ್ನು ಸರಿದೂಗಿಸಬೇಕು ಎಂದು ಹೇಳಿದರು.

ಕುಲಸಚಿವರು ದಿನಾಂಕ:08–03–2022ರಂದು ನಡೆದ ಸಿಂಡಿಕೇಟ್ ಸಭೆಯ ಉಳಿದ ನಿರ್ಣಯಗಳನ್ನು ಸಭೆಯಲ್ಲಿ ಓದಿದರು ಸಭೆಯು ನಡಾವಳಿಗಳನ್ನು ಸ್ಥಿರೀಕರಿಸಿತು.

## ಅಭಿವೃದ್ಧಿ ವಿಭಾಗ

**2022–ಸಿಂ–2.02** : ವಿಶ್ವವಿದ್ಯಾಲಯದ ಸ್ನಾತಕೋತ್ತರ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗ – ಇವರು Nirantara Scientific Soluations Pvt. Ltd. Bengaluru – ಇವರೊಂದಿಗೆ ಮುಂದಿನ 05 ವರ್ಷಗಳಿಗೆ ಒಡಂಬಡಿಕೆಯನ್ನು ನವೀಕರಿಸಿ ಮುಂದುವರೆಸುವ ಬಗ್ಗೆ.

**ನಿರ್ಣಯ** : ಚರ್ಚೆಯ ನಂತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗ – ಇವರು Nirantara Scientific Soluations Pvt. Ltd. Bengaluru – ಇವರೊಂದಿಗೆ ಮುಂದಿನ 05 ವರ್ಷಗಳಿಗೆ ಒಡಂಬಡಿಕೆಯನ್ನು ನವೀಕರಿಸಲು ಸಭೆಯು ಅನುಮೋದನೆ ನೀಡಿತು.

## ಶೈಕ್ಷಣಿಕ ವಿಭಾಗ

**2022–ಸಿಂ–2.03** : **"ಕುವೆಂಪು ವಿಶ್ವವಿದ್ಯಾಲಯದ ಪದವಿ ಕಾಲೇಜು ಸಮಾಜಶಾಸ್ತ್ರ ಅಧ್ಯಾಪಕರ ಸಂಘ, ಶಿವಮೊಗ್ಗ"** – ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ಕಾರ್ಯದರ್ಶಿಗಳು ಕುವೆಂಪು ವಿಶ್ವವಿದ್ಯಾಲಯ, ಪದವಿ ಕಾಲೇಜು ಸಮಾಜಶಾಸ್ತ್ರ ಅಧ್ಯಾಪಕರ ಸಂಘ, ಶಿವಮೊಗ್ಗ – ಇವರು **"ಕುವೆಂಪು ವಿಶ್ವವಿದ್ಯಾಲಯ, ಪದವಿ ಕಾಲೇಜು ಸಮಾಜಶಾಸ್ತ್ರ ಅಧ್ಯಾಪಕರ ಸಂಘ, ಶಿವಮೊಗ್ಗ"** ಇವರ ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯದ ಕಲಾ ನಿಕಾಯದ ಸ್ನಾತಕ ಪದವಿಯ ಬಿ.ಎ. ಸಮಾಜಶಾಸ್ತ್ರ ವಿಷಯದಲ್ಲಿ(ರೆಗ್ಯೂಲರ್) ಮೊದಲ ಪ್ರಯತ್ನದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ 2021–22ನೇ (32ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ ಸ್ವರ್ಣಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮತಿಸಿತು.

**2022–ಸಿಂ–2.04 : "Desheeya Vidyashala Samithi (R), Shimogga. Platinum Jublee"** – ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ** : Sri S. Rajashekar, Secretary, Desheeya Vidyashala Samithi (R) Shivamogga – ಇವರು **"Desheeya Vidyashala Samithi (R), Shimogga. Platinum Jublee"** ಇವರ ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣಾ ಅಧ್ಯಯನ ವಿಷಯದಲ್ಲಿ(ರೆಗ್ಯೂಲರ್) ಮೊದಲ ಪ್ರಯತ್ನದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ನಿಗೆ 2020–21ನೇ (31ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ ಸ್ವರ್ಣಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮತಿಸಿತು.

**2022–ಸಿಂ–2.05 : "Late Smt. MALLIGEMMMA and Late Shri H.S. SIDDALINGAPPA, Rtd. School Head Master, Hosadurga(Tq), Chitradurga(Dist)"** – ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ** : ಪ್ರೊ. ಹೆಚ್ ಎಸ್ ಜಯಣ್ಣ, ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ – ಇವರು **"Late Smt. MALLIGEMMMA and Late Shri H.S. SIDDALINGAPPA, Rtd. School Head Master, Hosadurga(Tq), Chitradurga(Dist)"** – ಇವರ ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಬಿ.ಇಡಿ. ಪದವಿಯ ವಿಷಯಾಧಾರಿತ ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರ ವಿಷಯಗಳಲ್ಲಿ ಮೊದಲ ಪ್ರಯತ್ನದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ 2020–21ನೇ (31ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ ಸ್ವರ್ಣಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮತಿಸಿತು.

## ಕಾಲೇಜು ಅಭಿವೃದ್ಧಿ ವಿಭಾಗ

**2022–ಸಿಂ–2.06 :** ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ 2021–22 ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳ ವರದಿಗಳನ್ನು ಅನುಮೋದನೆಗೆ ಮಂಡಿಸುವ ಬಗ್ಗೆ.

**ಚರ್ಚೆ** : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ, ಹೆಬ್ಬೂರು ಕಲಾ ಮತ್ತು ವಾಣಿಜ್ಯ ಕಾಲೇಜು ಹಳೇನಗರ ಭದ್ರಾವತಿ, ಈ ಕಾಲೇಜಿಗೆ 2021–22 ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿ ಭೇಟಿ ನೀಡಿ ವರದಿ ನೀಡಿರುವ ಹಿನ್ನೆಲೆಯಲ್ಲಿ ಮುಂದುವರಿಕೆ ಸಂಯೋಜನೆಗಾಗಿ ವಿಷಯ ಮಂಡಿಸಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಇವರು ಮಾತನಾಡಿ ಈ ಕಾಲೇಜಿನ ಬಗ್ಗೆ ದೂರುಗಳು ಇರುವುದರಿಂದ ಇನ್ನೊಮ್ಮೆ ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಿದರು. ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಇದಕ್ಕೆ ಧ್ವನಿಗೂಡಿಸಿದರು. ಕುಲಸಚಿವರು ಮಾತನಾಡಿ ಈಗಾಗಲೇ ದೂರಿನ ಕುರಿತು ಸಮಿತಿ ರಚಿಸಲಾಗಿದೆ ಎಂದು ಹೇಳಿದರು.

**ನಿರ್ಣಯ** : ಚರ್ಚೆಯ ನಂತರ ಸ್ಥಳೀಯ ತಪಾಸಣಾ ಸಮಿತಿಯು(LIC)ಯು ಸಂಯೋಜನೆಗೆ ಪೂರಕ ಅಂಶಗಳನ್ನು ಒದಗಿಸಿದ್ದು, ಸಂಸ್ಥೆಯ ವಿರುದ್ಧ ಇರುವ ದೂರಿನ ಬಗ್ಗೆ ರಚಿಸಲಾದ ಸತ್ಯ ಶೋಧನಾ ಸಮಿತಿಗೆ ಸಿಂಡಿಕೇಟ್ ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಇವರನ್ನು ಸದಸ್ಯರಾಗಿ ಸೇರ್ಪಡಿಸಲು ನಿರ್ಣಯಿಸಲಾಯಿತು

## ಪರೀಕ್ಷಾ ವಿಭಾಗ

**2022–ಸಿಂ–2.07** : ಹೊಸ ಶಿಕ್ಷಣ ನೀತಿ(NEP)ಯಡಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಶುಲ್ಕ ನಿಗದಿಪಡಿಸಿರುವ ಕುರಿತು.

**ಚರ್ಚೆ** : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಹೊಸ ಶಿಕ್ಷಣ ನೀತಿ(NEP)ಯಡಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ನಿಗದಿಪಡಿಸಿರುವ ಕುರಿತು ಅನುಮೋದನೆಗಾಗಿ ಮಂಡಿಸಿದೆ ಎಂದು ಹೇಳಿದರು. ಸದಸ್ಯರಾದ ಡಾ. ಬಿ.ಜಿ. ಧನಂಜಯ ಇವರು ಮಾತನಾಡಿ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ವೃತ್ತಿಪರವಲ್ಲದ ಕೋರ್ಸುಗಳಿಗೆ ಎಷ್ಟು ಶುಲ್ಕ ಎಂದು ಸ್ಪಷ್ಟವಾಗಿ ನಮೂದಿಸಿಲ್ಲ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ವಿಶ್ವವಿದ್ಯಾಲಯದ ಎಲ್ಲಾ ನಿಕಾಯಗಳ ಡೀನರು, ಯು.ಯು.ಸಿ.ಎಂ.ಎಸ್. ನೋಡಲ್ ಆಫೀಸರ್ ಹಾಗೂ ಕುಲಸಚಿವರು (ಪರೀಕ್ಷಾಂಗ)ರವರು ಸಭೆ ಸೇರಿ ಈ ಶುಲ್ಕಗಳನ್ನು ನಿಗದಿ ಮಾಡಲಾಗಿದೆ. ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಹಾಗೂ ಇತರೆ ಕೆಲವು ವಿಶ್ವವಿದ್ಯಾಲಯಗಳು ಈಗಾಗಲೇ ನಿಗದಿಪಡಿಸಿರುವ ಶುಲ್ಕಗಳನ್ನು ಪರಿಶೀಲಿಸಿ ನಮ್ಮ ವಿಶ್ವವಿದ್ಯಾಲಯದ ಶುಲ್ಕಗಳನ್ನು ನಿಗದಿ ಮಾಡಲಾಗಿದೆ. ಬೇರೆ ಎಲ್ಲಾ ವಿಶ್ವವಿದ್ಯಾಲಯಗಳಿಗಿಂತ ನಮ್ಮ ವಿಶ್ವವಿದ್ಯಾಲಯದ ಶುಲ್ಕ ಕಡಿಮೆಯೇ ಇದೆ. ಒಂದು ಕೋರ್ಸಿಗೆ ಇಷ್ಟೇ ಶುಲ್ಕ ಎಂದು ನಿಗದಿ ಮಾಡುವುದು ಕಷ್ಟವಾಗುತ್ತದೆ. ಹೊಸ ಶಿಕ್ಷಣ ನೀತಿಯಲ್ಲಿ ಒಬ್ಬ ವಿದ್ಯಾರ್ಥಿಯು ಯಾವುದೇ ಇತರೆ ಕೋರ್ಸಿಗೆ ಸಂಬಂಧಿಸಿದ ಪತ್ರಿಕೆಯನ್ನು ಐಚ್ಛಿಕ (ಎಲೆಕ್ಟಿವ್) ಆಗಿ ತೆಗೆದುಕೊಳ್ಳಬಹುದು. ಆದ್ದರಿಂದ ವಿದ್ಯಾರ್ಥಿಗಳಿಗೆ ಹೊರೆಯಾಗಬಾರದು ಹಾಗೂ ಗೊಂದಲವಾಗಬಾರದು ಎಂಬ ಕಾರಣಕ್ಕಾಗಿ ಈ ರೀತಿ ಶುಲ್ಕ ನಿಗದಿಪಡಿಸಲಾಗಿದೆ. ಅಂಕಪಟ್ಟಿ ಶುಲ್ಕ ನಿಗದಿ ಮಾಡಲಾಗಿದೆ ಆದರೆ ಅಂಕಪಟ್ಟಿಗಳು ಇನ್ನು ಮುಂದೆ ಡಿಜಿಟಲ್ ಆಗುತ್ತಿದೆ ಎಂಬ ಮಾಹಿತಿ ಇದೆ. ಡಿಜಿಟಲ್ ಆದರೆ ಅಂಕಪಟ್ಟಿ ಶುಲ್ಕ ಪಾವತಿಸುವ ಅಗತ್ಯವಿಲ್ಲ ಎಂದು ಹೇಳಿದರು.

*ಸದಸ್ಯರಾದ ಶ್ರೀಮತಿ* ಭಾರತಿಯವರು ಮಾತನಾಡಿ ಆದರೂ ಶುಲ್ಕ ಹೆಚ್ಚಿಸುತ್ತದೆ ಎಂದು ಹೇಳಿದರು. ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಬಿ.ಕಾಂ. ಪದವಿಯು ಹೊಸ ಶಿಕ್ಷಣ ನೀತಿಯ ಪ್ರಕಾರ ವೃತ್ತಿಪರ ಕೋರ್ಸ್ ಆಗಿರುವುದರಿಂದ ಹಿಂದೆ ರೂ. 1200/– ಇದ್ದ ಶುಲ್ಕವನ್ನು ರೂ. 1800/–ಕ್ಕೆ ಹೆಚ್ಚಿಸಲಾಗಿದೆ, ಉತ್ತರ ಪತ್ರಿಕೆಯ ಜೆರಾಕ್ಸ್ ಶುಲ್ಕವು ಹಿಂದೆ ರೂ. 825/– ಇದ್ದು ಈಗ ರೂ. 1100/–ಕ್ಕೆ ಹೆಚ್ಚಿಸಲಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ನಟೇಶ್ ರವರು ಮಾತನಾಡಿ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿಗಳಿಗೆ ರೂ.1100/- ಶುಲ್ಕ ನಿಗದಿ ಮಾಡಲಾಗಿದೆ. ಆದರೆ ಪ್ರಸ್ತುತ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಗಳನ್ನು ಆನ್ ಲೈನ್ ಮುಖಾಂತರ ಮೇಲ್ ಕಳುಹಿಸಲಾಗುತ್ತದೆ. ಹಾರ್ಡ್ ಕಾಪಿ ಕೊಡುವುದಿಲ್ಲ ಆದ್ದರಿಂದ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿಗಳಿಗೆ ಶುಲ್ಕ ಕಡಿಮೆ ಮಾಡಬೇಕು ಎಂದು ಹೇಳಿದರು. ಹಾಗೂ ಎಪ್ರಿಲ್ 04 ರಿಂದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಬೇಕು ಆದರೆ ಪೋರ್ಟಲ್ ಓಪನ್ ಆಗುತ್ತಿಲ್ಲ ಈ ಬಗ್ಗೆ ಪರಿಶೀಲಿಸಬೇಕು ಎಂದು ಕೋರಿದರು.

ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ಬಿ.ಕಾಂ. ಪರೀಕ್ಷಾ ಶುಲ್ಕವನ್ನು ರೂ.1500/- ಮಾಡಬಹುದು ಹಾಗೂ ಉತ್ತರ ಪತ್ರಿಕೆ ಜೆರಾಕ್ಸ್ ಶುಲ್ಕವನ್ನು ಸ್ವಲ್ಪ ಕಡಿಮೆ ಮಾಡಬಹುದು ಎಂದು ಹೇಳಿದರು.

ನಿರ್ಣಯ : ಸುದೀರ್ಘ ಚರ್ಚೆಯ ನಂತರ ಬಿ.ಕಾಂ. ಪರೀಕ್ಷಾ ಶುಲ್ಕವನ್ನು ರೂ.1800/- ಕ್ಕೆ ಬದಲಾಗಿ ರೂ.1500/- ಎಂದು ನಿಗದಿಪಡಿಸಲು ಹಾಗೂ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿಗಳಿಗೆ ನಿಗದಿಪಡಿಸಿರುವ ಶುಲ್ಕ ರೂ.1100/-ಕ್ಕೆ ಬದಲಾಗಿ ರೂ.900/- ಎಂದು ನಿಗದಿಪಡಿಸಲು ನಿರ್ಣಯಿಸಲಾಯಿತು ಉಳಿದಂತೆ ಪಟ್ಟಿಯನ್ನು ಅನುಮೋದಿಸಲಾಯಿತು.

**2022-ಸಿಂ-2.08 :** ದಿನಾಂಕ:24-01-2022 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

ಚರ್ಚೆ : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ದಿನಾಂಕ:24-01-2022 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದು ಹೇಳಿದರು.

ಸದಸ್ಯರು ಹಾಗೂ ಪ್ರಾಂಶುಪಾಲರಾದ ಡಾ. ಧನಂಜಯ್‌ರವರು ಮಾತನಾಡಿ ವಿಶ್ವವಿದ್ಯಾಲಯದಿಂದ ಕಳುಹಿಸಿ ಕೊಡುವ ಸ್ಕ್ವಾಡ್‌ಗಳು ಹಾಗೂ ಕಾಲೇಜಿನಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸುವ ಪರೀಕ್ಷಾ ಮೇಲ್ವಿಚಾರಕರಿಗೆ ವಿಶ್ವವಿದ್ಯಾಲಯವು ನೀಡುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅದೇಶ ನೀಡಬೇಕು ಎಂದು ಕೋರಿದರು. ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ್‌ರವರೂ ಸ್ಕ್ವಾಡ್‌ಗಳಿಗೆ ಸೂಚನೆ ನೀಡಬೇಕು ಎಂದು ಹೇಳಿದರು.

ನಿರ್ಣಯ : ಚರ್ಚೆಯ ನಂತರ ದಿನಾಂಕ:24-01-2022 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಸ್ಥಿರೀಕರಿಸಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2022-ಸಿಂ-2.09 :** ವಿಶ್ವವಿದ್ಯಾಲಯ ಗ್ರಂಥಾಲಯಕ್ಕೆ ಯು.ಪಿ.ಎಸ್. & ಬ್ಯಾಟರೀಸ್‌ಗಳನ್ನು ಖರೀದಿಸುವ ಸಂಬಂಧದ ಇ-ಟೆಂಡರ್ ಅಂಗೀಕರಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ ವಿಶ್ವವಿದ್ಯಾಲಯ ಗ್ರಂಥಾಲಯಕ್ಕೆ ಯು.ಪಿ.ಎಸ್. & ಬ್ಯಾಟರೀಸ್‌ಗಳನ್ನು ಖರೀದಿಸುವ ಸಂಬಂಧದ ಇ-ಟೆಂಡರ್‌ನ್ನು ಸಭೆಯು ಅಂಗೀಕರಿಸಿತು.

## ಮಾನವ ಸಂಪನ್ಮೂಲ ವಿಭಾಗ

**2022–ಸಿಂ–2.10** : ದಿನಾಂಕ:30–11–2021 ಕ್ಕೆ ಇದ್ದಂತೆ 371(ಜೆ) ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ನೌಕರರ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಕುರಿತು.

**ಚರ್ಚೆ** : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ದಿನಾಂಕ:30–11–2021 ಕ್ಕೆ ಇದ್ದಂತೆ 371(ಜೆ) ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ನೌಕರರ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿ ಈ ಕುರಿತು ಆಕ್ಷೇಪಣೆಗಳೇನಾದರೂ ಇದ್ದರೆ ದಿನಾಂಕ: 25–02–2022ರೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು, ನಿಗದಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತಗೊಂಡಿರದೇ ಇರುವುದರಿಂದ ಸದರಿ ಪಟ್ಟಿಯನ್ನು ಅಂತಿಮಗೊಳಿಸುವ ಕುರಿತು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದು ಹೇಳಿದರು.

**ನಿರ್ಣಯ** : ಚರ್ಚೆಯ ನಂತರ ದಿನಾಂಕ:31–11–2021 ಕ್ಕೆ ಇದ್ದಂತೆ ಸಿದ್ದಪಡಿಸಿದ 371(ಜೆ) ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ನೌಕರರ ಜೇಷ್ಠತಾ ಪಟ್ಟಿಗೆ ನಿಗದಿತ ದಿನಾಂಕದೊಳಗೆ ಯಾವುದೇ ನೌಕರರು ಆಕ್ಷೇಪಣೆ ಸಲ್ಲಿಸದೇ ಇರುವುದರಿಂದ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲು ಸಭೆಯು ಅನುಮೋದನೆ ನೀಡಿತು.

**2022–ಸಿಂ–2.11** : ಡಾ. ಚಂದ್ರಶೇಖರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ಸಬ್ಬಾಟಿಕಲ್ ರಜೆ ಮಂಜೂರಾತಿ ಕುರಿತು.

**ನಿರ್ಣಯ** : ಚರ್ಚೆಯ ನಂತರ ಡಾ. ಚಂದ್ರಶೇಖರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ಸಬ್ಬಾಟಿಕಲ್ ರಜೆ ಮಂಜೂರು ಮಾಡಲು ಸಭೆಯು ಅನುಮತಿ ನೀಡಿತು.

**2022–ಸಿಂ–2.12** : ಸಿಬ್ಬಂದಿಗಳ ವೈದ್ಯಕೀಯ ಚಿಕಿತ್ಸೆಗಾಗಿ ವಿಶ್ವವಿದ್ಯಾಲಯದಿಂದ ಖಾಸಗಿ ಆಸ್ಪತ್ರೆಗೆ ಮಾನ್ಯತೆ ನೀಡುವ ಕುರಿತು

ನಿರ್ಣಯ : ಚರ್ಚೆಯ ನಂತರ ಸರ್ಕಾರದಿಂದ ಅನುಮೋದಿಸಲ್ಪಟ್ಟಿದ್ದರೆ ಮಾತ್ರ ಮಾನ್ಯತೆ ನೀಡಬೇಕೆಂದು ಸಭೆಯು ನಿರ್ಣಯಿಸಿತು.

**2022–ಸಿಂ–2.12(ಎ)**: ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸುವ ಕುರಿತು.

ನಿರ್ಣಯ: ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸಲು ಸಭೆಯು ಅನುಮೋದನೆ ನೀಡಿತು.

## ಹಣಕಾಸು ವಿಭಾಗ

**2022–ಸಿಂ–2.13** : 2022–23 ನೇ ಆರ್ಥಿಕ ಸಾಲಿನ ಅಂದಾಜು ಆಯವ್ಯಯ ಚರ್ಚೆ ಮತ್ತು ಅನುಮೋದನೆ ಬಗ್ಗೆ.

**ಚರ್ಚೆ** : ಕುಲಸಚಿವರು 2022–23 ನೇ ಆರ್ಥಿಕ ಸಾಲಿನ ಅಂದಾಜು ಆಯವ್ಯಯ ಚರ್ಚೆ ಮತ್ತು ಅನುಮೋದನೆಗಾಗಿ ಮಂಡಿಸಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಆಯವ್ಯಯದಲ್ಲಿ 12% ಕೊರತೆ ಬಜೆಟ್ ತೋರಿಸಿದ್ದಾರೆ ಇದನ್ನು ಕಡಿಮೆ ಮಾಡುವ ಬಗ್ಗೆ ಪರಿಶೀಲಿಸಬೇಕು ಎಂದು ಹೇಳಿದರು.

ಹಣಕಾಸು ಅಧಿಕಾರಿಗಳು ಚರ್ಚೆಯಲ್ಲಿ ಭಾಗವಹಿಸಿ ನಮ್ಮ ಪ್ರಸ್ತಾವನೆಯಲ್ಲಿ ಕೋರುವ ಅನುದಾನವನ್ನು ಪೂರ್ಣವಾಗಿ ಸರ್ಕಾರವು ಮಂಜೂರು ಮಾಡುವುದಿಲ್ಲ. ಉದಾಹರಣೆಗೆ ಎಂಟು ಕೋಟಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಸರ್ಕಾರವು 2–3 ಕೋಟಿ ಅನುದಾನವನ್ನು ಮಂಜೂರು ಮಾಡಿ ಉಳಿದಿದ್ದನ್ನು ಆಂತರಿಕ ಸಂಪನ್ಮೂಲದಿಂದ ಭರಿಸುವಂತೆ ನಿರ್ದೇಶಿಸುತ್ತದೆ, ಎಂದು ಹೇಳಿದರು.

ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಅನುದಾನವನ್ನು ಆಧರಿಸಿ ಪೂರ್ಣಪ್ರಮಾಣದ ಆಯವ್ಯಯವನ್ನು ಸಿದ್ದಪಡಿಸಬೇಕು, ಸರ್ಕಾರ ಅನುದಾನ ಕಡಿತಗೊಳಿಸುವ ದೃಷ್ಟಿಯಿಂದ ಎಂದು ವಿಶ್ವವಿದ್ಯಾಲಯವೇ ಆಯವ್ಯಯ ಕಡಿತಗೊಳಿಸಿ ಸಿದ್ದಪಡಿಸಬಾರದು, ಸರ್ಕಾರದಲ್ಲಿ ಅನುದಾನ ಕೊರತೆಯಿದ್ದಲ್ಲಿ ಅನುದಾನ ಕ್ರೋಢೀಕರಣ ಆದ ನಂತರ ಅನುದಾನ ನೀಡುತ್ತದೆ. ಕೊರೊನಾ ಸಮಯದಲ್ಲಿ ಸಂಪನ್ಮೂಲ ಕೊರತೆಯಿದೆ ಎಂಬ ಕಾರಣಕ್ಕೆ ಅನುದಾನ ಕಡಿತಗೊಳಿಸಿರಬಹುದು ಆದರೆ ಕೊಡಬೇಕಾಗಿರುವುದನ್ನು ಕೊಡಲೇಬೇಕಲ್ಲವೇ ಎಂದು ಹೇಳಿದರು.

ಸದಸ್ಯರಾದ ಶ್ರೀ ನಟೇಶ್‌ರವರು ಮಾತನಾಡಿ ಸರ್ಕಾರಿ ಕಾಲೇಜುಗಳಿಗೆ ಸಾಕಷ್ಟು ಅನುದಾನ ಬರುತ್ತದೆ, ಉಳಿದ ಅನುದಾನವನ್ನು ನಾವೇ ಸರ್ಕಾರಕ್ಕೆ ಹಿಂದಿರುಗಿಸುತ್ತೇವೆ. ವಿಶ್ವವಿದ್ಯಾಲಯಕ್ಕೆ ಯಾಕೆ ಕಡಿತಗೊಳಿಸುತ್ತಾರೆ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಇತ್ತೀಚೆಗೆ ಸರ್ಕಾರದ ಆರ್ಥಿಕ ಇಲಾಖೆಯು ನಿವೃತ್ತ ನೌಕರರಿಗೆ ನೀಡುವ ನಿವೃತ್ತಿ ಸೌಲಭ್ಯಗಳನ್ನೂ ಸಹ ತಮ್ಮ ಆಂತರಿಕ ಸಂಪನ್ಮೂಲದಿಂದಲೇ ಭರಿಸಬೇಕು ಎಂದು ತಿಳಿಸಿರುತ್ತದೆ ಎಂದು ಹೇಳಿದರು.

ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ನಿವೃತ್ತ ನೌಕರರ ನಿವೃತ್ತಿ ಸೌಲಭ್ಯಗಳಿಗೆ ಅನುದಾನ ಕೊಡುವುದು ಸರ್ಕಾರದ ಕರ್ತವ್ಯ ಕೊಡಲೇಬೇಕು ಎಂದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಸರ್ಕಾರಕ್ಕೆ ಸಾಕಷ್ಟು ಬಾರಿ ಅನುದಾನ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಿದ್ದೇವೆ ಆದರೆ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಹೇಳಿದರು. ಅಲ್ಲದೇ ಎನ್.ಪಿ.ಎಸ್. ವ್ಯಾಪ್ತಿಗೊಳಪಡುವ ನೌಕರರ ವೇತನದ ಭಾಗ 10% ಜೊತೆಗೆ ಸರ್ಕಾರದ ಭಾಗವಾದ 14% ಕೂಡ ವಿಶ್ವವಿದ್ಯಾಲಯವೇ ಭರಿಸಬೇಕು ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಆರ್ಥಿಕತೆಯನ್ನು ಸರಿದೂಗಿಸುವುದು ಬಹಳ ಕಷ್ಟದ ಕೆಲಸವಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಸರ್ಕಾರ ಇಂದಲ್ಲಾ ನಾಳೆ ಅನುದಾನವನ್ನು ನೀಡುತ್ತದೆ ಆದ್ದರಿಂದ ಪೂರ್ಣ ಪ್ರಮಾಣದ ಆಯವ್ಯಯವನ್ನು ಸಿದ್ದಪಡಿಸಿ ಶೇಕಡವಾರು ಕೊರತೆ ಬಜೆಟ್‌ನ ಪ್ರಮಾಣವನ್ನು ಕಡಿಮೆಗೊಳಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿದರು. ಹಾಗೂ ಆಯವ್ಯಯದಲ್ಲಿ ಕೆಲವೊಂದು ಮಾರ್ಪಾಡು ಮಾಡಿಕೊಂಡು ಆದಾಯ ಬರುವ ಮೂಲಗಳನ್ನು ವಿಶ್ವವಿದ್ಯಾಲಯದಲ್ಲಿ ಅಭಿವೃದ್ಧಿ ಮಾಡಿಕೊಂಡು ವೆಚ್ಚವನ್ನು ಹೇಗೆ ಕಡಿಮೆ ಮಾಡಬೇಕೆಂಬ ಬಗ್ಗೆ ಎಲ್ಲಾ ಸದಸ್ಯರೂ ವಿಸ್ತೃತವಾಗಿ ಚರ್ಚಿಸಿ ಹಣಕಾಸು ಅಧಿಕಾರಿಗಳಿಗೆ ಕೆಲವು ಸಲಹೆ ಸೂಚನೆಗಳನ್ನು ನೀಡಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ಬಗ್ಗೆ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಸರ್ಕಾರದ ಮಟ್ಟದಲ್ಲಿ ಸಮಜಾಯಿಷಿ ನೀಡಿ ಹೆಚ್ಚಿನ ಅನುದಾನವನ್ನು ತರಲು ತಾವೇ ಸ್ವತ: ಹೋಗಬೇಕು ಎಂದು ಹಣಕಾಸು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ನಿರ್ಣಯ :** ಸಭೆಯು ನೀಡಿದ ಸಲಹೆ ಸೂಚನೆಗಳನ್ವಯ ಹಣಕಾಸು ಅಧಿಕಾರಿಗಳು ಆಯವ್ಯಯದಲ್ಲಿ ಕೆಲವೊಂದು ಮಾರ್ಪಾಡು ಮಾಡಿರುವುದನ್ನು ಸಭೆಯು ಗಮನಿಸಿ, 2022-23 ನೇ ಆರ್ಥಿಕ ಸಾಲಿನ ತಿದ್ದುಪಡಿಯಾದ ಅಂದಾಜು ಆಯವ್ಯಯಕ್ಕೆ ಸಭೆಯು ಅನುಮೋದನೆ ನೀಡಿತು.

## ದೈಹಿಕ ಶಿಕ್ಷಣ ವಿಭಾಗ

**2022–ಸಿಂ–2.13(ಎ): ದೈಹಿಕ ಶಿಕ್ಷಣ ನಿರ್ದೇಶನಾಲಯ ಇ–ಟೆಂಡರ್ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಕುರಿತು**

ನಿರ್ಣಯ : ಚರ್ಚೆಯ ನಂತರ ಸದ್ಯದಲ್ಲೇ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ತೆರಳಬೇಕಾಗಿದ್ದು ತುರ್ತು ಇರುವುದರಿಂದ ದೈಹಿಕ ಶಿಕ್ಷಣ ನಿರ್ದೇಶನಾಲಯದ ಇ–ಟೆಂಡರ್ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2022–ಸಿಂ–2.14 : ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:**

1. ಶ್ರೀ ಧನಂಜಯ ಬಿ.ಜಿ.

1) ಪಿಹೆಚ್.ಡಿ ಪದವಿ ಪಡೆದ 15 ವರ್ಷ ಸೇವೆ ಸಲ್ಲಿಸಿರುವ ಪ್ರಾಧ್ಯಾಪಕರುಗಳಿಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನಕ್ಕೆ ಅವಕಾಶ ಕಲ್ಪಿಸುವುದು.

ನಿರ್ಣಯ: ಈ ಕುರಿತು ವಿಶ್ವವಿದ್ಯಾಲಯದಿಂದ ಈಗಾಗಲೇ ಪತ್ರದ ಮೂಲಕ ನೀಡಿರುವ ಮಾಹಿತಿಯನ್ನು ಸದಸ್ಯರು ಒಪ್ಪಿದರು.

2) 02 ಶೈಕ್ಷಣಿಕ ವರ್ಷ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರಿಗೆ ಮೌಲ್ಯಮಾಪನಕ್ಕೆ ಅವಕಾಶ ನೀಡುವ ಕುರಿತು.

ನಿರ್ಣಯ: ಈ ಕುರಿತು ಚರ್ಚೆಯ ನಂತರ 03 ಶೈಕ್ಷಣಿಕ ವರ್ಷ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿರುವ ಅತಿಥಿ ಉಪನ್ಯಾಸಕರಿಗೆ ಮೌಲ್ಯಮಾಪನಕ್ಕೆ ಅವರ ಸೇವೆ ಅತ್ಯಗತ್ಯವಿದ್ದಲ್ಲಿ ಅವಕಾಶ ನೀಡಲು ತೀರ್ಮಾನಿಸಲಾಯಿತು.

2. ಶ್ರೀ ನಟೇಶ್ ಎಸ್.ಎಂ.

ಚಿಕ್ಕಮಗಳೂರಿನಲ್ಲಿ ಖಾಯಂ ಮೌಲ್ಯಮಾಪನ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ.

ಈ ಕುರಿತು ಮಾತನಾಡಿದ ಶ್ರೀ ನಟೇಶ್ ಎಸ್.ಎಂ. ಇವರು ಮೌಲಯಮಾಪನ ಕೇಂದ್ರ ನೀಡಿದರೆ ಆ ಭಾಗದ ಕಾಲೇಜುಗಳ ಅಧ್ಯಾಪಕರಿಗೆ ಅನುಕೂಲವಾಗುತ್ತದೆ. ಚಿಕ್ಕಮಗಳೂರು ಸ್ನಾತಕೋತ್ತರ ಕೇಂದ್ರವು ಅಭಿವೃದ್ಧಿ ಆಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಈ ಬಗ್ಗೆ ಪರಿಶೀಲಿಸಿ ಎಂದು ಕೋರಿದರು.

ಕುಲಸಚಿವರು(ಪರೀಕ್ಷಾಂಗ)ರವರು ಮಾತನಾಡಿ ಕೊರೋನಾ ಸಮಯದಲ್ಲಿ ಚಿಕ್ಕಮಗಳೂರಿನಲ್ಲಿ ಮೌಲ್ಯಮಾಪನ ಕೇಂದ್ರ ತೆರೆಯಲಾಗಿತ್ತು, ಈಗ ಖಾಯಂ ಮೌಲ್ಯಮಾಪನ ಕೇಂದ್ರ ಪ್ರಾರಂಭಿಸಬೇಕು ಎಂದರೆ ಸುರಕ್ಷತೆ ಮತ್ತು ಭದ್ರತೆಯ ಕುರಿತು ಪರಿಶೀಲಿಸಬೇಕು ಎಂದು ಹೇಳಿದರು.

ನಿರ್ಣಯ: ಅಂತಿಮವಾಗಿ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲು ಕುಲಸಚಿವ(ಪರೀಕ್ಷಾಂಗ)ರವರಿಗೆ ಸೂಚಿಸಲಾಯಿತು.

**2022–ಸಿಂ–2.15 : ಸರ್ಕಾರದಿಂದ ಬಂದ ಪತ್ರಗಳು/ರಹಸ್ಯ ವರದಿಗಳ ಮಂಡನೆ :**

ಯಾವುದೂ ಇರುವುದಿಲ್ಲ.

**2022–ಸಿಂ–2.16 : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :**

ಕುಲಸಚಿವರು ಮಾತನಾಡಿ ತಿದ್ದುಪಡಿಯಾದ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಯ ಪರಿನಿಯಮವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದು ಹೇಳಿದರು. ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು 25–30 ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಅವರಿಗೆ ಯಾವುದೇ ಬಡ್ತಿಗೆ ಅವಕಾಶವಿಲ್ಲ ಆದ್ದರಿಂದ ಪರಿನಿಯಮ ಅನುಮೋದನೆಯಾದರೆ ಅವರುಗಳಿಗೂ ಬಡ್ತಿಗೆ ಅವಕಾಶ ಸಿಗುತ್ತದೆ ಆದ್ದರಿಂದ ಅನುಮೋದಿಸಬಹುದು ಎಂದು ಹೇಳಿದರು.

ನಿರ್ಣಯ: ಚರ್ಚೆಯ ನಂತರ ತಿದ್ದುಪಡಿಯಾದ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಯ ಪರಿನಿಯಮವನ್ನು ಸಭೆಯು ಅನುಮೋದಿಸಿತು.

1) **ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಂಡಿಸಿದ ವಿಷಯ:**

ಮೂರು ಜನ ವಾಹನ ಚಾಲಕರನ್ನು ಅಗತ್ಯ ಸೇವೆ ಎಂಬ ಕಾರಣಕ್ಕಾಗಿ ಹಂಗಾಮಿ ನೌಕರರು ಎಂದು ನೇಮಕ ಮಾಡಬೇಕೆಂದು ಕೋರಿದರು. ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಪರಿನಿಯಮ ಇದೆ ಅದನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಬೇಕು ಎಂದರು. ಕುಲಸಚಿವರು ಮಾತನಾಡಿ ಪರಿನಿಯಮವನ್ನು ಪರಿನಿಯಮ ಸ್ಥಾಯಿ ಸಮಿತಿಯು ಪರಿಶೀಲಿಸಿ ಅನುಮೋದಿಸಿದ ನಂತರ ಸರ್ಕಾರಕ್ಕೆ ಕಳುಹಿಸಬಹುದು ಎಂದು ಹೇಳಿದರು.

ನಿರ್ಣಯ: ಚರ್ಚೆಯ ನಂತರ ಪರಿನಿಯಮವನ್ನು ಸಭೆಯು ಅನುಮೋದಿಸಿತು. ಸದರಿ ಪರಿನಿಯಮವನ್ನು ಪರಿನಿಯಮ ಸ್ಥಾಯಿ ಸಮಿತಿಯಲ್ಲಿಟ್ಟು ಅನುಮೋದನೆಯಾದ ನಂತರ ಸರ್ಕಾರಕ್ಕೆ ಕಳುಹಿಸಿಕೊಡಲು ನಿರ್ಣಯಿಸಲಾಯಿತು.

ಸದಸ್ಯರಾದ ಪ್ರೊ ರಿಯಾಜ್ ಮಹಮೂದ್‌ರವರು ಮಾತನಾಡಿ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುವವರೂ ಕೂಡ ವಿಶ್ವವಿದ್ಯಾಲಯದಲ್ಲಿ ಬಹಳ ವರ್ಷಗಳಿಂದ ಕೆಲಸ ನಿರ್ವಹಿಸುತಿದ್ದಾರೆ ಅವರನ್ನು ಅಗತ್ಯ ಸೇವೆಗಳಡಿಯಲ್ಲಿ ಪರಿಗಣಿಸಿ ಹಂಗಾಮಿಯಾಗಿ ನೇಮಿಸುವ ಬಗ್ಗೆ ಪರಿಶೀಲಿಸುವಂತೆ ಕೋರಿದರು.

2) **ಸದಸ್ಯರಾದ ಶ್ರೀ ಜಿ ಧರ್ಮಪ್ರಸಾದ್‌ರವರು ಮಂಡಿಸಿದ ವಿಷಯಗಳು:**

1) ಸದಸ್ಯರಾದ ಶ್ರೀ ಜಿ ಧರ್ಮಪ್ರಸಾದ್‌ರವರು ಮಾತನಾಡಿ ಸಹ್ಯಾದ್ರಿ ಕಾಲೇಜಿನ ಅಧ್ಯಾಪಕರುಗಳಾದ ಡಾ. ಪ್ರಹ್ಲಾದಪ್ಪ ಹಾಗೂ ಡಾ. ಪರಮೇಶ್ವರ ನಾಯಕ್ ಇವರ ವೃತ್ತಿಪದೋನ್ನತಿ ಅರ್ಹತಾ ದಿನಾಂಕದ ಕುರಿತು ಇರುವ ಗೊಂದಲ ಪರಿಹರಿಸಬೇಕೆಂದು ಕೋರಿದರು.

ಕುಲಸಚಿವರು ಈ ಕುರಿತು ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು ಪರಿಶೀಲಿಸುವುದಾಗಿ ತಿಳಿಸಿದರು.

2) ಸಹ್ಯಾದ್ರಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕೇತರ ನೌಕರರಾದ ಶ್ರೀ ಟಿ.ಆರ್. ಶ್ರೀನಿವಾಸಮೂರ್ತಿ, ಕಿರಿಯ ಸಹಾಯಕರು, ಇವರು ನಿಗದಿತ ಅವಧಿಯಲ್ಲಿ ಇಲಾಖಾ ಪರೀಕ್ಷೆ ಉತ್ತೀರ್ಣವಾಗದ ಹಿನ್ನೆಲೆಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪರಿಗಣಿಸಿರುವುದಿಲ್ಲ. ಆದರೆ ಈಗ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದರಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆ ನೀಡುವ ಕುರಿತು ನಿಯಮಾನುಸಾರ ಪರಿಶೀಲಿಸುವಂತೆ ಕೋರಿದರು.

3 ಶ್ರೀ ಸುಧಾಕರ್ ಪಿ. ಇವರು ಇಂಜಿನಿಯರಿಂಗ್ ವಿಭಾಗದಲ್ಲಿ ಹಲವು ವರ್ಷಗಳಿಂದ ಪಂಪ್ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಇವರಿಗೆ ನಿಯಮಾನುಸಾರ ಸೀನಿಯರ್ ಪಂಪ್ ಆಪರೇಟರ್ ಆಗಿ ಬಡ್ತಿ ನೀಡುವ ಕುರಿತು ಪರಿಶೀಲಿಸಬೇಕು ಎಂದು ಕೋರಿದರು. ಇದರಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ, ಹುದ್ದೆ ಮಾತ್ರ ಬದಲಾವಣೆಯಾಗುತ್ತದೆ ಅಲ್ಲದೆ ಈಗಾಗಲೇ ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ ಎಂದು ಹೇಳಿದರು.

4. ಕುಲಸಚಿವರ ಕಾರ್ಯಾಲಯದಲ್ಲಿ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ರೇವಣ್ಣ ಇವರು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ವಿಶ್ವವಿದ್ಯಾಲಯದಿಂದ ನಿಯೋಜನೆಯ ಮೇರೆಗೆ ನಮ್ಮ ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತಿದ್ದಾರೆ. ಅವರನ್ನು ಹುದ್ದೆ ಸಹಿತ ಕುವೆಂಪು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡಬೇಕೆಂದು ಕೋರಿ ಉನ್ನತ ಶಿಕ್ಷಣ ಇಲಾಖೆಗೆ ವಿಶ್ವವಿದ್ಯಾಲಯದಿಂದಲೇ ಪತ್ರ ಬರೆಯುವಂತೆ ಕೋರಿದರು.

5. **ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಂಡಿಸಿದ ವಿಷಯ:**

ಉಳಿದ ಹಂಗಾಮಿ : ವಿಲೀನೀಕರಣದ ನೌಕರರಿಗೂ ಸೌಲಭ್ಯಗಳನ್ನು ವಿಸ್ತರಿಸಲು ದಿ:16-10-2020ರ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವಾಗಿದ್ದರೂ, 8 ನೌಕರರಿಗೆ ನ್ಯಾಯಾಲಯ ನೀಡಿರುವ ತೀರ್ಪುಗಳಿಗೂ, ಉಳಿದ ನೌಕರರಿಗೆ ಸೌಲಭ್ಯ ವಿಸ್ತರಣೆಗೂ ಸಂಬಂಧ ಇಲ್ಲದಿದ್ದರೂ ಈವರೆಗೂ ಸದರಿ ಮಂಜೂರಾತಿ ಆದೇಶ ನೀಡಿಲ್ಲ ಎಂದು ಆರೋಪಿಸಿದರು.

6. **ಸದಸ್ಯರಾದ ಶ್ರೀಯುತ ಹೆಚ್.ಬಿ. ರಮೇಶ್ ಬಾಬುರವರು** ಅಧ್ಯಕ್ಷ ಅಪ್ಪಣೆಯ ಮೇರೆಗೆ ಕಡೂರಿನ ಪಿ.ಜಿ. ಸೆಂಟರ್‌ನ ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿರುವ ಶ್ರೀ ಸಂಪತ್‌ಕುಮಾರ್ ರವರಿಗೆ ಸಂಚಿತ ವೇತನವನ್ನು ನೀಡಲು ಆಗ್ರಹಿಸಿದರು. ಇದನ್ನು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಮೇಲ್ಕಂಡ ಎಲ್ಲಾ ವಿಷಯಗಳ ಕುರಿತು ನಿಯಮಾನುಸಾರ ಪರಿಶೀಲಿಸುವುದಾಗಿ ಕುಲಸಚಿವರು ತಿಳಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಸಹಿ/-
ಕುಲಪತಿಗಳು

ಕುಲಸಚಿವರು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**